(2)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ಜಿಲ್ಲೆಗಳ 1000 ಗ್ರಾಮಗಳಲ್ಲಿ 3ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಸಂಖ್ಯೆ:ಗ್ರಾಅಪ:150:ಆರ್‌ಆರ್‌ಸಿ:2006 ದಿನಾಂಕ.07.10.2006.

ಪ್ರಸ್ತಾವನೆ:

ಕರ್ನಾಟಕವು ಏಕೀಕರಣಗೊಂಡು ಒಂದನೇ ನವೆಂಬರ್ 2006ಕ್ಕೆ 50 ವರ್ಷಗಳಾಗಿದ್ದು, ಆ ವರ್ಷವನ್ನು "ಸುವರ್ಣ ಕರ್ನಾಟಕ" ವರ್ಷವೆಂದು ಅರ್ಥಪೂರ್ಣವಾಗಿ ಆಚರಿಲು ಉದ್ದೇಶಿಸಿ ಸುವರ್ಣ ಗ್ರಾಮೋದಯ ಎಂಬ ವಿನೂತನ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಪ್ರತಿ ವರ್ಷ 1000 ಗ್ರಾಮಗಳನ್ನು ಆಯ್ಕೆ ಮಾಡಿ ಆಯ್ದ ಗ್ರಾಮಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವುದಾಗಿದೆ. ಮೊದಲನೇ ಹಂತದಲ್ಲಿ 1204 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿ ಕಾರ್ಯಕ್ರಮವು ವಿವಿಧ ಹಂತದಲ್ಲಿರುತ್ತವೆ. ಡಾ.ಡಿ.ಎಂ.ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತಾಧಿಕಾರದ ಸಮಿತಿಯ ವರದಿ ಆಧಾರಿತ ಗುಲ್ಬರ್ಗಾ ವಿಭಾಗವು ಅತಿ ಹೆಚ್ಚಿನ ಹಿಂದುಳಿದ ತಾಲ್ಲೂಕುಗಳನ್ನು ಹೊಂದಿರುವುದರಿಂದ ಸದರಿ ವಿಭಾಗದಲ್ಲಿ ಅಂದಾಜು ರೂ 208.20 ಕೋಟಿಗಳ ವೆಚ್ಚದಲ್ಲಿ ಸುಮಾರು 200 ಗ್ರಾಮಗಳನ್ನು ಆಯ್ಕೆ ಮಾಡಿ ಸುವರ್ಣ ಗ್ರಾಮೋದಯ ಯೋಜನೆಯನ್ನು 2ನೇ ಹಂತದಲ್ಲಿ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶವನ್ನು ದಿ:03.10.2008ರಂದು ಹೊರಡಿಸಲಾಗಿದೆ. ಸದರಿ ಸರ್ಕಾರಿ ಆದೇಶದಲ್ಲಿ ತಿಳಿಸಲಾದಂತೆ ಗುಲ್ಬರ್ಗಾ ಕಂದಾಯ ವಿಭಾಗದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 2ನೇ ಹಂತದಲ್ಲಿ ಆಯ್ಕೆ ಮಾಡಲಾಗುವ 200 ಗ್ರಾಮಗಳನ್ನು ಹೊರತುಪಡಿಸಿ ಈ ವರ್ಷದಲ್ಲೂ ಸಹ ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತದಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಸರ್ವತೋಮುಖ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಗ್ರಾಮಗಳ ಆಯ್ಕೆ ವಿಧಾನ, ತಾಲ್ಲೂಕು ಅನುದಾನ ಹಂಚಿಕೆ ಮತ್ತು ವಿವಿಧ ಕಾಮಗಾರಿಗಳ ಅನುಷ್ಠಾನ ಮಾರ್ಗಸೂಚಿಯನ್ನು ಮೂಲ ಯೋಜನೆಯಲ್ಲಿದ್ದಂತೆ ಅನುಸರಿಸಲಾಗುವುದು. ಗ್ರಾಮಗಳ ಅನುದಾನ ಹಂಚಿಕೆ ಕುರಿತಂತೆ ಗ್ರಾಮಾಂತರ ಪ್ರದೇಶದ ಜನಸಂಖ್ಯೆ ಮತ್ತು ತಾಲ್ಲೂಕಿಗೆ ನಿಗದಿಯಾದ ಅನುದಾನದಲ್ಲಿ ತಲಾನುದಾನ ಹಂಚಿಕೆಯನ್ನು ರೂ.2500 ಗಳಿಗೆ ಒತ್ತು ನೀಡಿ ಮತ್ತು ಆಯಾ ಗ್ರಾಮದ 2001ರ ಜನಗಣತಿಯ ಜನಸಂಖ್ಯೆಯಂತೆ ಹಂಚಿಕೆಯಾಗುತ್ತದೆ. ಸುವರ್ಣ ಗ್ರಾಮೋದಯ ಯೋಜನೆಯ ಉದ್ದೇಶ, ಮಾರ್ಗಸೂಚಿ ಮತ್ತು ಕಾರ್ಯಾನುಷ್ಠಾನ ವಿಧಿಗಳು ಮೂಲ ಕೈಪಿಡಿಯಲ್ಲಿ ತಿಳಿಸಿದಂತೆ ಇರುತ್ತವೆ. ಪ್ರಯುಕ್ತ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:101:ಸುಗ್ರಾಯೋ2008,ಬೆಂಗಳೂರು, ದಿನಾಂಕ:01.01.2009</u>**

ಮೇಲಿನ ಪ್ರಸ್ತಾವನೆಗಳ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತದಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಗ್ರಾಮೀಣ ಅಭಿವೃದ್ಧಿಯನ್ನು ರೂ:1000.00 ಕೋಟಿ ವೆಚ್ಚದಲ್ಲಿ ಈ ಕುರಿತು ಹಿಂದೆ ರಚಿಸಲಾದ ಮಾರ್ಗಸೂಚಿಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರ ಮಂಜೂರಾತಿ

ನೀಡಿದೆ. ಈ ಯೋಜನೆಗೆ ತಗಲುವ ಅನುದಾನ ಮತ್ತು ಮಾರ್ಗಸೂಚಿಗಳನ್ನು ಉಲ್ಲೇಖಿತ ಆದೇಶದ ಅನುಬಂಧ, ತತ್ಸಂಬಂಧವಾಗಿ ಹೊರಡಿಸಲಾದ ಕೈಪಿಡಿಯಲ್ಲಿ ಮತ್ತು ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆಗಳನ್ವಯ ಅನುಷ್ಠಾನಗೊಳಿಸುವುದು.

ತತ್ಸಂಬಂಧವಾದ ವೆಚ್ಚವನ್ನು ಲೆಕ್ಕ ಶೀರ್ಷಿಕೆ 4215-02-800-0-02-132 (ಯೋಜನೆ)ಯಡಿ ಭರಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: **PD 89 DPD 2006**, **ದಿ:25.9.2006** ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: **ಆಇ:1170:ವೆಚ್ಚ-6/2006** **ದಿ:26.09.2006** ರಲ್ಲಿ ಪಡೆದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ.ಶಮ್ಲಾ ಇಕ್ಬಾಲ್)
ನಿರ್ದೇಶಕರು(ಸ್ವಉಕಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲಕರು(ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲಕರು(ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲಕರು(ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಅಧ್ಯಕ್ಷರು, 3ನೇ ಹಣಕಾಸು ಆಯೋಗ, ಕರ್ನಾಟಕ ರಾಜ್ಯ,ಕೊಠಡಿ ಸಂ.302,3ನೇ ಮಹಡಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಅಯುಕ್ತರು, ವಿಧಾನಸೌಧ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಇಲಾಖೆ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಇಲಾಖೆ, ಬೆಂಗಳೂರು.